# ಜೊಲ್ಲೆ ಗ್ರೂಪ್

## ವಾರ್ತಾ ಪತ್ರ

(ಖಾಸಗಿ ಸುತ್ತೋಲೆ ಸಲುವಾಗಿ ಮಾತ್ರ)

ನವೆಂಬರ್ 2023–ಸಂಪುಟ–7 ಸಂಚಿಕೆ–12

# ದರ್ಪಣ




ಚಿಕ್ಕೋಡಿ ಲೋಕಸಬಾ ಸದಸ್ಯರಾ ಶ್ರೀ ಅಣ್ಣಾಸಾಹೇಬ ಜೊಲ್ಲೆಯವರ ಹುಟ್ಟುಹಬ್ಬದ ಪ್ರಯುಕ್ತ ಜೊಲ್ಲೆ ಗ್ರೂಪ್ ವತಿಯಿಂದ ಏರ್ಪಡಿಸಿದ್ದ ಚಿಕ್ಕೋಡಿ, ಹುಕ್ಕೇರಿ, ನಿಪ್ಪಾಣಿ, ಕಾಗವಾಡ, ಯಮಕನಮರಡಿ, ರಾಯಬಾಗ, ಕುಡಚಿ, ಅಥಣಿ ಹ್ಯಾಜ್ ಟ್ಯಾಲೆಂಟ್" ನಲ್ಲಿ ಗೆದ್ದ ಸ್ಪರ್ದಿಗಳು "ಗ್ರ್ಯಾಂಡ್ ಫಿನಾಲೆ" ಸ್ಪರ್ಧೆಯಲ್ಲಿ ಭಾಗವಹಿಸಿ ಗ್ರಾಂಡ್ ಫಿನಾಲೆಯಲ್ಲಿ ಪ್ರಥಮ ಬಹುಮಾನ ಗೆದ್ದ ರಶ್ಮೀ ಪಾಟೀಲ ಸಾ–ಕೊಥಳಿ ತಂಡದವರಿಗೆ 51,000 ರೂ ಚೆಕ್‌ನ್ನು ನಿಡುತ್ತಿರುವ ದೃಶ್ಯ.

## ಸಾರ್ಥಕ 61ರ ಸಂಭ್ರಮದಲ್ಲಿ

### ಚಿಕ್ಕೋಡಿ ಲೋಕಸಭಾ ಸದಸ್ಯರು ಹಾಗೂ ಸಹಕಾರ ರತ್ನ

## ಶ್ರೀ ಅಣ್ಣಾಸಾಹೇಬ ಶಂಕರ ಜೊಲ್ಲೆ

ಸಹಕಾರ ಮಹರ್ಷಿ ಎಂದೇ ಚಿರಪರಿಚಿತರಾಗಿರುವ ಶ್ರೀ ಅಣ್ಣಾಸಾಹೇಬ ಜೊಲ್ಲೆಯವರು ಸಹಕಾರ ಕ್ಷೇತ್ರದಲ್ಲಿ 'ಜೊಲ್ಲೆ ಗ್ರೂಪ್' ಸ್ಥಾಪಿಸಿ ಸಹಸ್ರಾರು ಜನರಿಗೆ ಉದ್ಯೋಗ ಕಲ್ಪಿಸುವ ಮೂಲಕ ಸಮಾಜದಲ್ಲಿರುವ ವಿವಿಧ ಸಮಸ್ಯೆಗಳಿಗೆ ಪೂರಕವಾಗಿ ಸ್ಪಂದಿಸುತ್ತಿದ್ದಾರೆ. ವಿಶಿಷ್ಟ ವ್ಯಕ್ತಿತ್ವ ಹೊಂದಿರುವ ಅಣ್ಣಾಜೀಯವರು ಸಾರ್ಥಕ 61ರ ಸಂಭ್ರಮದಲ್ಲಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ. ಕಷ್ಟದಲ್ಲಿ ಇದ್ದವರಿಗೆ ಸಹಾಯ ಸಹಕಾರ ನೀಡುವ ಮಾನವೀಯ ಮೌಲ್ಯಗಳ ಸಾಕಾರ ಮೂರ್ತಿಯಾದ ಇವರ ಬದುಕು ನಮಗೆ ಆದರ್ಶಪ್ರಾಯವಾಗಿದೆ. ಇವರ ಸಾಧನೆ ಆಕಾಶದಷ್ಟು ಎತ್ತರ! ರಾಜಕೀಯ ಕ್ಷೇತ್ರದಲ್ಲಿ ದಿಟ್ಟ ಹೆಜ್ಜೆಯನ್ನು ಇಟ್ಟು ತಮ್ಮ ಲೋಕಸಭಾ ಕ್ಷೇತ್ರದ ಸರ್ವಾಂಗೀಣ ಬೆಳವಣಿಗೆಗಾಗಿ ಸತತ ಧನಾತ್ಮಕ ಚಿಂತನೆಗಳನ್ನು ಮಾಡಿ, ಸ್ವಯಂ ಯೋಜನೆಗಳನ್ನು ರೂಪಿಸಿ ಅವುಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಅಣ್ಣಾಜೀಯವರ ಪಾತ್ರ ಮಹತ್ತರವಾಗಿದೆ ಜೊತೆಗೆ ಸರ್ಕಾರದ ಯೋಜನೆಗಳನ್ನು ಜನಸಾಮಾನ್ಯರು ಹಾಗೂ ದುರ್ಬಲರ ಮನೆಬಾಗಿಲಿಗೆ ತಲುಪಿಸುವ ಹೃದಯವಂತಿಕೆಯ ಅಪರೂಪದ ರಾಜಕಾರಣಿ ಎಂದರೆ ಅತಿಶಯೋಕ್ತಿಯಾಗಲಾರದು.

ಯಶಸ್ಸನ್ನು ಪಡೆಯಲು ದೃಢ ಸಂಕಲ್ಪ, ದೃಢ ನಂಬಿಕೆಗಳು, ಸದೃಢ ಮನಸ್ಸು, ಶೃದ್ಧೆ ಮತ್ತು ಸತತ ಪರಿಶ್ರಮ ಮುಖ್ಯವಾಗಿದೆ ಎಂಬುವುದಕ್ಕೆ ಇವರೇ ಸತ್ಯ ನಿದರ್ಶನವಾಗಿದ್ದಾರೆ. ತಮಗೆ ನೀಡಿದ ಎಲ್ಲ ಜವಾಬ್ದಾರಿಯನ್ನು ಅತ್ಯಂತ ಸಮರ್ಪಕವಾಗಿ ನಿರ್ವಹಣೆ ಮಾಡುವುದರ ಮೂಲಕ ಯಶಸ್ವಿ ಬದುಕಿಗೆ ಪರಿಶ್ರಮವೇ ಸೋಪಾನ ಎಂಬುವುದನ್ನು ಸಾಬೀತುಪಡಿಸಿದ್ದಾರೆ. ಸಹಕಾರ ರತ್ನ, ವಿಶ್ವೇಶ್ವರ ಅವಾರ್ಡ, ನ್ಯಾಷ್ನಲ್ ಯುನಿಟಿ ಅವಾರ್ಡ, ಕನಕ ಪ್ರಶಸ್ತಿ, ಮನಸೂರ ಅವಾರ್ಡ, ಎಚ್‌ಡಿ ಚೌಡಯ್ಯ ಸಹಕಾರ ಪ್ರಶಸ್ತಿ ಹೀಗೆ ಹಲವಾರು ಪ್ರಶಸ್ತಿಗಳು ಇವರ ಪರಿಶ್ರಮಕ್ಕೆ ದೊರೆತ ಪ್ರತಿಫಲವಾಗಿವೆ.

ಕರ್ನಾಟಕ ಅಷ್ಟೇ ಅಲ್ಲದೆ ಬೇರೆ ರಾಜ್ಯದ ಜನಸಮುದಾಯ ಮತ್ತು ರೈತರ ಸಮಸ್ಯೆಗಳಿಗೆ ಸ್ಪಂದಿಸುವ ರೈತರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುವ ಇವರಂತಹ ದೀಮಂತ ನಾಯಕರನ್ನು ಪಡೆದ ನಾವೇ ಧನ್ಯರು. ಶ್ರೀ ಬೀರೇಶ್ವರ ಕೋ–ಆಪ್. ಕ್ರೆಡಿಟ್ ಸೋಸಾಯಟಿ ಲಿ., ಯಕ್ಸಂಬಾ(ಮಲ್ಟಿ–ಸ್ಟೇಟ)ದ 183 ಶಾಖೆಗಳು ಹಾಗೂ ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಯಕ್ಸಂಬಾದ 81 ಶಾಖೆಗಳು ಅದೇರೀತಿ ಶಿಕ್ಷಣದ ವಿವಿಧ ಅಂಗಸಂಸ್ಥೆಗಳನ್ನು ಸ್ಥಾಪಿಸಿ ಎಲ್ಲೆಡೆ ಸಮಾಜಮುಖಿ ಕಾರ್ಯಗಳಿಗೆ ಅನುಕೂಲಿಸಿದ್ದಾರೆ. ಸಹಕಾರ, ಶಿಕ್ಷಣ, ಸಮಾಜ ಮತ್ತು


### ಶ್ರೀ ಬೀರೇಶ್ವರ ಕೋ–ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ–ಸ್ಟೇಟ)





ಉದ್ಯೋಗದ ಕ್ಷೇತ್ರಗಳಲ್ಲಿ ಶಿಸ್ತು ಸಂಯಮತೆ, ಸಮಯ ಪ್ರಜ್ಞೆ, ದಕ್ಷತೆ ಮತ್ತು ವೃತ್ತಿಪರತೆಯ ಮೌಲ್ಯಗಳನ್ನು ಹೆಚ್ಚಿಸಲು ನಿರಂತರವಾಗಿ ಸಲಹೆ ಸೂಚನೆ ಮಾರ್ಗದರ್ಶನ ನೀಡಿ ಈ ಎಲ್ಲ ಕ್ಷೇತ್ರಗಳ ಸರ್ವತೋಮುಖ ವಿಕಾಸದ ಪರಿಕಲ್ಪನೆಯನ್ನು ಹೊಂದಿರುವ ಇವರಂತಹ ಅತ್ಯುತ್ತಮ ನಾಯಕರನ್ನು ಪಡೆದಿರುವುದು ನಮ್ಮ ಭಾಗ್ಯವೇ ಸರಿ.

ಸಾಧನೆ ಸಾಧಕರ ಸ್ವತ್ತು, ಪ್ರತಿಭೆ ಪ್ರತಿಭಾವಂತರ ಸ್ವತ್ತು ಎಂಬ ನಾನ್ನುಡಿಗೆ ಜೀವ ತುಂಬುವ ಕಾರ್ಯವನ್ನು "ಚಿಕ್ಕೋಡಿ ಹ್ಯಾಜ್ ಟ್ಯಾಲೆಂಟ್" ಎಂಬ ಪ್ರತಿಭಾವಂತರ ವೇದಿಕೆ ಸಿದ್ಧಗೋಳಿಸಿ ಹಳ್ಳಿ ಹಳ್ಳಿಗಳಲ್ಲಿ ಅಡಗಿರುವ ಪ್ರತಿಭೆಗಳನ್ನು ಹುಡುಕಿ ಲೋಕಸಭಾ ವ್ಯಾಪ್ತಿಯಲ್ಲಿ ಬರುವ ಎಲ್ಲ ಪ್ರತಿಭಾವಂತರಿಗೆ ಸದಾವಕಾಶ ಕಲ್ಪಿಸಿಕೊಟ್ಟು ಜೊಲ್ಲೆ ಗ್ರೂಪ್ ಹೊಸ ಮೈಲಿಗಲ್ಲು ನಿರ್ಮಿಸಿದೆ. ಯಾವಾಗಲು ಸಮಾಜ ಸೇವೆಗೆ ಮಿಡಿಯುವ ಇವರ ಹೃದಯ, ಇವರು ಕೈಗೊಳ್ಳುತ್ತಿರುವ ಜನಪರ ಕಾರ್ಯಗಳು ಅನುಪಮವಾದವುಗಳು.

ಜೊಲ್ಲೆ ಗ್ರೂಪ್ ಸಹಕಾರ, ಸಮಾಜ, ಶಿಕ್ಷಣ ಮತ್ತು ಉದ್ಯೋಗ ಮಾತ್ರವಲ್ಲದೇ ಸಾಂಸ್ಕೃತಿಕ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆ ನೀಡುತ್ತಿದೆ. ಎಂಬುವುದಕ್ಕೆ "ಚಿಕ್ಕೋಡಿ ಹ್ಯಾಜ್ ಟಾಲೆಂಟ್" ಕಾರ್ಯಕ್ರಮ ಜೀವಂತ ಸಾಕ್ಷಿಯಾಗಿದೆ. ಅಣ್ಣಾಜೀಯವರ ಜನ್ಮದಿನದ ಪ್ರಯುಕ್ತ ಯಾವುದೇ ವಯಸ್ಸಿನ ಮಿತಿಇಲ್ಲದೆ, ಗುಂಪು ನೃತ್ಯ, ಕಲೆ, ಜಾದು, ಸೋಲೊನೃತ್ಯ, ಸ್ಟಂಟ್, ಗಾಯನ, ಭಜನೆ, ಸಾಹಸ ಮತ್ತು ಆಡ್ ಮೆಕಿಂಗ್ ಹೀಗೆ ಹತ್ತು ಹಲವಾರು ಸ್ಪರ್ಧೆಗಳಿಗೆ ಅವಕಾಶ ನೀಡಿ ಗ್ರಾಮೀಣ ಭಾಗದಲ್ಲಿ ಅಡಗಿರುವ ಪ್ರತಿಭೆಗಳನ್ನು ಹುಡುಕಿ ಪ್ರತಿಭಾ ಅನಾವರಣಗೊಳಿಸಲಾಯಿತು. ಸದಾ ಎಲ್ಲರಿಗೂ ಸ್ಪೂರ್ತಿಯಾಗಿರುವ ನಿಪ್ಪಾಣಿಯ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ, ಶ್ರೀ. ಜ್ಯೋತಿಪ್ರಸಾದ ಜೊಲ್ಲೆ, ಶ್ರೀ. ಬಸವಪ್ರಸಾದ ಜೊಲ್ಲೆಯವರು ಅಣ್ಣಾಜೀಯವರ ಎಲ್ಲ ಸಾಧನೆಗಳಿಗೆ ಆಧಾರ ಸ್ಥಂಬಗಳಾಗಿ ನಿಂತು ಪ್ರೇರಕ ಶಕ್ತಿಯಾಗಿ ಅಣ್ಣಾಜೀಯವರ ಕ್ರೀಯಾಶೀಲತೆಯನ್ನು ನೂರ್ಮಡಿಗೊಳಿಸುತ್ತಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ಸಂಗತಿಯಾಗಿದೆ.

"ಸಾರ್ಥಕ 61"ರ ಸಂಭ್ರಮದಲ್ಲಿರುವ ಜನಪ್ರಿಯ ವ್ಯಕ್ತಿತ್ವ ಹೊಂದಿರುವ ಜನಪರ ಧೋರಣೆಗಳ ಸಾಕಾರ ಮೂರ್ತಿಯಾಗಿರುವ ಚಿಕ್ಕೋಡಿ ಲೋಕಸಭಾ ಸದಸ್ಯರು, ಸಂಸ್ಥಾಪಕರು ನಮ್ಮೆಲ್ಲರ ಮಾರ್ಗದರ್ಶಕರಾಗಿರುವ ಶ್ರೀ. ಅಣ್ಣಾಸಾಹೇಬ ಜೊಲ್ಲೆ (ಅಣ್ಣಾಜೀ) ಅವರಿಗೆ ಹುಟ್ಟುಹಬ್ಬದ ಅನಂತಕೋಟಿ ಶುಭಾಷಯಗಳು!! ವಿಶಿಷ್ಟ ವ್ಯಕ್ತಿತ್ವ ಹೊಂದಿರುವ ನಮ್ಮೆಲ್ಲರ ಪೂಜ್ಯನಿಯ ಅಣ್ಣಾಜೀ ಅವರಿಗೆ ದೇವರು ಒಳ್ಳೆಯ ಆಯುರ್ಆರೋಗ್ಯ ದಯಪಾಲಿಸಿ ದುಡಿಯುವ ವರ್ಗಕ್ಕೆ ಸದಾ ನೆರಳಾಗುವ ಚೈತನ್ಯ ನೀಡಲೆಂದು ಶುಭ ಆಶಿಸಿ ಪ್ರಾರ್ಥಿಸೋಣ !!


ಪ್ರೋ. ಬಾಬಾಸಾಹೇಬ ಆರ್. ಕಾಮನಗೋಳ
ಸಹ ಪ್ರಾಧ್ಯಾಪಕರು
ಡಾ॥ ಬಾಬಾಸಾಹೇಬ ಅಂಬೇಡ್ಕರ (ಬಿ.ಇಡಿ.)
ಶಿಕ್ಷಣ ಮಹಾವಿದ್ಯಾಲಯ, ನಣದಿ

# ವಿಶ್ವ ಅಂಚೆ ದಿನ–2023

ಇಂದು ನಾವು ವಿಶ್ವದಾದ್ಯಂತ ಹಲವು ಬಗೆಯಲ್ಲಿ ನಿರ್ದಿಷ್ಟ ಅಥವಾ ವಿಶಿಷ್ಟ ದಿನಾಚರಣೆಗಳನ್ನು ಆಚರಿಸುತ್ತೇವೆ. ಕೆಲವು ವಿಶ್ವಮಟ್ಟದಲ್ಲಿ ಆಚರಿಸಲ್ಪಟ್ಟರೆ ಇನ್ನೂ ಕೆಲವು ರಾಷ್ಟ್ರೀಯ ಮಟ್ಟದಲ್ಲಿ ಆಚರಿಸಲ್ಪಡುತ್ತವೆ. ಒಟ್ಟಿನಲ್ಲಿ ಈ ದಿನಾಚರಣೆಗಳ ಹಿಂದೆ ಏನಾದರೂ ವಿಶೇಷತೆ ಅಥವಾ ಜಾಗೃತಿ/ಅರಿವು ಮೂಡಿಸುವಂತಹ ಕಾರಣಗಳು ಇದ್ದೇ ಇರುತ್ತವೆ ಎನ್ನಬಹುದು.

ವರ್ಲ್ಡ್ ಪೋಸ್ಟ್ ಡೇ ಅಥವಾ ವಿಶ್ವ ಅಂಚೆ ದಿನ ಎಂಬುದು ಸಹ ಪ್ರಚಲಿತದಲ್ಲಿದ್ದು ಪ್ರತಿ ವರ್ಷ ಅಕ್ಟೋಬರ್ 9 ರಂದು ಇದನ್ನು ಆಚರಿಸಲಾಗುತ್ತದೆ. ಯುನಿವರ್ಸಲ್ ಪೋಸ್ಟಲ್ ಕಾಂಗ್ರೆಸ್ ಸಂಸ್ಥಾನವು ಮೊದಲ ಬಾರಿಗೆ ಈ ದಿನವನ್ನು ಆಚರಣೆಗೆ ಸಂಬಂಧಿಸಿದಂತೆ 1969 ರಲ್ಲಿ ಜಪಾನಿನ ಟೋಕಿಯೊದಲ್ಲಿ ಇದನ್ನು ಘೋಷಿಸಿತು.

ಅಷ್ಟಕ್ಕೂ ಈ ಸಂಸ್ಥಾನವು ಇಂತಹ ಅಂಚೆ ದಿನಾಚರಣೆಯನ್ನು ಘೋಷಣೆ ಮಾಡುವುದಕ್ಕೂ ಕಾರಣವಿರಬೇಕಲ್ಲವೆ? ಹೌದು, ಖಂಡಿತ ಇದೆ, ಜಾಗತಿಕವಾಗಿದ್ದ ಯುನಿವರ್ಸಲ್ ಪೋಸ್ಟಲ್ ಯುನಿಯನ್ ಸಂಘಟನೆಯ ವಾರ್ಷಿಕ ಸಂಭ್ರಮವನ್ನು ಗುರುತಿಸಲು ಈ ಒಂದು ಉಪಕ್ರಮವನ್ನು ಜಾರಿಗೆ ತಂದಿತು. ಅಷ್ಟಕ್ಕೂ ಯುನಿವರ್ಸಲ್ ಪೋಸ್ಟಲ್ ಯುನಿಯನ್ ಸೃಷ್ಟಿಯಾಗಿದ್ದು 1874 ರಲ್ಲಿ.

### ಅಂಚೆಗಿದೆ ವಿಶಿಷ್ಟ ಮಹತ್ವ

ಇಂದೇನೋ ಕಾಲ ಬದಲಾಗಿದೆ, ಥಟ್ ಅಂತ ಅಂಗೈನಲ್ಲೇ ಎಲ್ಲ ಸಮಾಚಾರಗಳನ್ನು, ಬಂಧು–ಮಿತ್ರರೊಂದಿಗೆ ಸಂವಹನವನ್ನು ಕ್ಷಣಗಳಲ್ಲೇ ಮಾಡಿ ಬಿಡಬಹುದು. ಆದರೆ ಹಲವಾರು ದಶಕಗಳ ಹಿಂದೆ ಪರಿಸ್ಥಿತಿ ಹೀಗಿರಲಿಲ್ಲ. ದೂರದ ಎಲ್ಲೊ ಇರುವ ನಮ್ಮವರೊಂದಿಗೆ ಸಂವಹನ ನಡೆಸಲು ಇದ್ದ ಮಾರ್ಗ ಪೋಸ್ಟ್ ಆಗಿತ್ತು.

ಅಲ್ಲದೆ, ಎಲ್ಲ ಸಮುದಾಯಗಳನ್ನು ಯಾವುದೇ ಬೇಧ–ಭಾವಗಳಿಲ್ಲದೆ ಬೆಸೆಯುವ ಮಾರ್ಗವಾಗಿತ್ತು ಈ ಅಂಚೆ ಎಂಬ ಪ್ರಕ್ರಿಯೆ. ನಿಮಗೆ ನೆನಪಿದೆಯೇ 6–70 ರ ದಶಕಗಳಲ್ಲಿ ಗುಡ್ಡ ಗಾಡು ಗ್ರಾಮಗಳಲ್ಲಿ ನೆಲೆಸಿದವರಿಗೆ ಅಂಚೆ ಸ್ವೀಕರಿಸುವುದೆಂದರೆ ಅದೆಷ್ಟೋ ಭಾವುಕಮಯ ಪ್ರಸಂಗವಾಗಿರುತ್ತಿತ್ತು.

ಖುಷಿಯ, ದುಖದ ಯಾವುದೇ ಸಂದೇಶವಿರಲಿ ಅಂಚೆ ಮಾಮನ ಬರುವಿಕೆ ಎದೆಯಲ್ಲಿ ಝಲ್ ಎನಿಸುತ್ತಿತ್ತು. ಅಷ್ಟೊಂದು ಅವಿನಾಭಾವ ಸಂಬಂಧವನ್ನು ನಾವು ಅಂಚೆಯೊಂದಿಗೆ ಹೊಂದಿದ್ದೇವೆ. ಇತ್ತೀಚಿನ ಯುವ ಪೀಳಿಗೆಗೆ ಅಂಚೆಯ ಬಗ್ಗೆ ಅಷ್ಟೊಂದು ಬಾಂಧವ್ಯ ಉಂಟಾಗದೆ ಇರಬಹುದು, ಆದರೆ ಅಂಚೆ ಕಳುಹಿಸುವುದು, ಸ್ವೀಕರಿಸುವ ಆ ಅನುಭವಗಳ ಚೆಂದದ ನೆನಪುಗಳು 70–80–90ರ ದಶಕದ ಜನರಿಗೆ ಈಗಲೂ ಚೆನ್ನಾಗಿ ತಿಳಿದಿರುತ್ತದೆ.

ಅದೃಷ್ಟವೆಂದರೆ ಇಂದು ಎಲ್ಲೆಡೆ ತಂತ್ರಜ್ಞಾನ ಕಾಲಿಟ್ಟರೂ, ಡಿಜಿಟಲ್ ಎಕಾನಾಮಿ ಎಂಬುದು ಪ್ರವರ್ಧಮಾನಕ್ಕೆ ಬಂದಿದ್ದರೂ ಅಂಚೆ/ಪೋಸ್ಟ್ ಕೊನೆಗೊಂಡಿಲ್ಲ, ಬದಲಾಗಿ ಅದು ಸಹ ತನ್ನನ್ನು ತಾನು ಡಿಜಿಟಲ್ ಮಾಡಿಕೊಳ್ಳುತ್ತಿದೆ.

ಅಂಚೆ ಎಂಬುದು ಕೇವಲ ಪತ್ರ/ಸಂದೇಶಗಳ ವಿನಿಮಯವಲ್ಲ, ಅದಕ್ಕೂ ಮಿಗಿಲಾದುದು, ವೈಯಕ್ತಿಕ ಹಣಕಾಸಿನ, ಆರ್ಥಿಕ ಶಿಸ್ತಿನ ಜೀವನ ಪಡೆಯುವ ಹಲವಾರು ಸೌಲಭ್ಯಗಳನ್ನು ಸಹ ಅಂಚೆ ಇಲಾಖೆ ಹೊಂದಿದೆ.

ಬ್ಯಾಂಕ್ ಗಳಂತೆಯೇ ಇಂದು ಪೋಸ್ಟ್ ಆಫೀಸ್ ಗಳಲ್ಲಿಯೂ ನಾಗರಿಕರು ಉತ್ತಮ ಆರ್ಥಿಕ ಆದಾಯ ನೀಡುವ ಹಲವಾರು ಉಪಯುಕ್ತ ಯೋಜನೆಗಳ ಲಾಭ ಪಡೆಯಬಹುದಾಗಿದೆ. ಸರ್ಕಾರಗಳಿಂದ ನಿರ್ವಹಿಸಲ್ಪಡುವ ಅಂಚೆ ನೀವು ಹೂಡುವ ಹಣಕ್ಕೆ ಖಚಿತ ಹಾಗೂ ಖಾತರಿ ಹೆಚ್ಚುವರಿ ಲಾಭ ನೀಡುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ.

### ಆಸಕ್ತಿಕರವಾದ ಅಂಚೆಯ ಕಿರು ಇತಿಹಾಸ

ಹಾಗೆ ನೋಡಿದರೆ ಅಂಚೆಯ ಇತಿಹಾಸ ಎಂಬುದು ಅದು ದಾಖಲಾದ ಸಮಯಕ್ಕಿಂತ ಹಿಂದಿನದು ಎನ್ನಲಾಗುತ್ತದೆ. 62 ಕ್ರಿ.ಪೂ – 14 ಕ್ರಿ.ಶ ಈ ಸಮಯದಲ್ಲಿ ಅಂದರೆ ರೋಮ್ ಸಾಮ್ರಾಜ್ಯದ ಆಗಸ್ಟಸ್ ಸೀಸರ್ ಸಮಯದಲ್ಲಿ ಪ್ರಥಮವಾಗಿ ಅಂಚೆ ಸೇವೆಯನ್ನು ಸಂಘಟಿಸಲಾಗಿತ್ತು ಎನ್ನಲಾಗುತ್ತದೆ.

ಇನ್ನು, ಬ್ರಿಟಿಷ್ ಪೋಸ್ಟಲ್ ಸಂಗ್ರಹಾಲಯದ ಅಧಿಕೃತ ಹೇಳಿಕೆಯ ಪ್ರಕಾರ, ಸ್ಕಾಟ್ಲ್ಯಾಂಡಿನ ಸಂಕ್ವಾಹರ್ ನಲ್ಲಿರುವ ಅಂಚೆ ಕಚೇರಿ ಅತಿ ಪುರಾತನದಿಂದ ಕಾರ್ಯಾಚರಣೆಯಲ್ಲಿರುವ ಅಂಚೆ ಕಚೇರಿಯಾಗಿದೆ. ಇದು 1712 ರಿಂದ ಕಾರ್ಯಾಚರಣೆಯಲ್ಲಿದೆ ಎನ್ನಲಾಗಿದೆ.

ತದನಂತರ, ಸಮಯ ಉರುಳಿದಂತೆ ಅಂಚೆ ಪ್ರಾಧನ್ಯತೆ ಪಡೆಯುತ್ತ ಬಂದಿತು ಹಾಗೂ 1874 ರಲ್ಲಿ ಸ್ವಿಟ್ಜರ್ಲ್ಯಾಂಡಿನ ರಾಜಧಾನಿ ಬರ್ನ್ ನಲ್ಲಿ ಯುನಿವರ್ಸಲ್ ಪೋಸ್ಟಲ್ ಯುನಿಯನ್ (ಯುಪಿಯು) ಅನ್ನು ಸ್ಥಾಪಿಸಲಾಯಿತು.

ಇಂದು ವಿಶ್ವ ಅಂಚೆ ದಿನವನ್ನು ಜಾಗತಿಕವಾಗಿ 151 ದೇಶಗಳಲ್ಲಿ ಆಚರಿಸಲಾಗುತ್ತದೆ ಹಾಗೂ ಈ ದಿನವನ್ನು ವಿಶ್ವ ಅಂಚೆ ದಿನವನ್ನಾಗಿ ಮೊದಲ ಬಾರಿಗೆ 1969 ರಲ್ಲಿ ಟೋಕಿಯೊದಲ್ಲಿ ನಡೆದ ಯುಪಿಯು ಕಾಂಗ್ರೆಸ್ ಸಭೆಯಲ್ಲಿ ಘೋಷಿಸಲಾಯಿತು.

ಅಂದಿನಿಂದ ಇದು ನಿರಂತರವಾಗಿ ವಿಶ್ವಾದ್ಯಂತ ಆಚರಿಸಲ್ಪಡುತ್ತಿರುವ ದಿನವಾಗಿದೆ. ಇನ್ನು, ಭಾರತವೂ ಸಹ ಈ ದಿನಕ್ಕೆ ಮಾನ್ಯತೆ ನೀಡಿದ್ದು ಇದಕ್ಕೆ ಸಂಬಂಧಿಸಿದಂತೆ ಒಂದು ಹೆಜ್ಜೆ ಮುಂದೆ ಇತ್ತಿದೆ ಎನ್ನಬಹುದು. ಹೌದು, ಅಕ್ಟೋಬರ್ 9 ರಿಂದ ಒಂದು ವಾರದವರೆಗೆ ಅಂದರೆ ಅಕ್ಟೋಬರ್ 15ರ ವರೆಗೆ ಭಾರತದಲ್ಲಿ ಇದನ್ನು ಅಂಚೆ ಸಪ್ತಾಹ ಎಂದು ಆಚರಿಸಲಾಗುತ್ತದೆ.

### ಈ ದಿನದ ಮಹತ್ವ

ಅಂಚೆ ಕೇವಲ ಕುಟುಂಬಗಳ/ಅಥವಾ ಮಿತ್ರರ ಮಧ್ಯದ ಸಂವಹನೆಯ ಮಾಧ್ಯಮವಾಗಿ ಉಳಿದಿಲ್ಲ. ಹಿಂದಿನ ದಶಕಗಳನ್ನೆಲ್ಲ ಗಮನಿಸಿದರೆ ಜಾಗತಿಕ ಮಟ್ಟದ ಎಲ್ಲ ರಂಗಗಳಲ್ಲಿ ಅಂಚೆಯ ಮಹತ್ವ ಹಿರಿದಾಗಿದೆ. ವ್ಯಾಪಾರ/ವ್ಯವಹಾರ, ವಿಜ್ಞಾನ, ಕೈಗಾರಿಕೆ, ಹಣಕಾಸು ಹೀಗೆ ಪ್ರತಿ ರಂಗಗಳಲ್ಲೂ ಅಂಚೆ ತನ್ನ ನಿರಂತರ ಹಾಗೂ ಪ್ರಾಮಾಣಿಕ ಸೇವೆ ಸಲ್ಲಿಸುತ್ತಲೇ ಬಂದಿದೆ.

ತನ್ನ ವಿಸ್ತಾರವಾದ ಸೇವಾ ಬಾಹುಗಳ ಮೂಲಕ ಲಕ್ಷಾಂತರ ಕುಟುಂಬಗಳು ನೆಮ್ಮದಿಯ ಜೀವನ ನಡೆಸಲು ಅನುವು ಮಾಡಿಕೊಟ್ಟಿದೆ. ಕೆಲ ಅಂದಾಜಿನ ಲೆಕ್ಕಾಚಾರಗಳ ಪ್ರಕಾರ ಅಂಚೆ ಸೇವೆಗಳು ಇಂದಿಗೂ ಜಗತ್ತಿನಾದ್ಯಂತ ಸುಮಾರು 1.5 ಬಿಲಿಯನ್ ಜನರಿಗೆ ಹಣಕಾಸು ಸೇವೆಗಳನ್ನು ಒದಗಿಸುತ್ತಿದೆ.

ಜಾಗತಿಕವಾಗಿ 5.3 ಮಿಲಿಯನ್ ಸಿಬ್ಬಂದಿ ಆರು ಲಕ್ಷಕ್ಕೂ ಹೆಚ್ಚು ಕಚೇರಿಗಳನ್ನು ಹೊಂದಿರುವ ಅಂಚೆ ಹಲವು ದೇಶಗಳ ಸರ್ಕಾರಗಳ ಮಂಚೂಣಿ ಸಾರ್ವಜನಿಕ ಸೇವೆಗಳಲ್ಲಿ ಒಂದಾಗಿ ತನ್ನನ್ನು ತಾನು ಗುರುತಿಸಿಕೊಂಡಿದೆ.

### ಏನೆಲ್ಲ ಮಾಡಲಾಗುತ್ತದೆ?

ಈ ದಿನದಂದು ಹಲವಾರು ದೇಶಗಳು ತಮ್ಮದೆ ಆದ ವಿಶಿಷ್ಟ ಆಚರಣೆಗಳನ್ನು ಮಾಡುತ್ತವೆ. ಕೆಲವು ಕಾರ್ಯಕ್ರಮಗಳನ್ನು ಏರ್ಪಡಿಸಿದರೆ ಇನ್ನು ಕೆಲವು ವಿನೂತನ ಅಂಚೆ ಸೇವೆಗಳನ್ನು ಪರಿಚಯಿಸುತ್ತವೆ.

ಬಹುತೇಕವಾಗಿ ಬಹು ಸಂಖ್ಯಾತ ದೇಶಗಳು ತಮ್ಮ ಅಂಚೆ ವಿಭಾಗದ ಉತ್ಪನ್ನಗಳು ಹಾಗೂ ಲಭ್ಯ ವಿರುವ ಸೌಲಭ್ಯ/ಸೇವೆಗಳ ಪ್ರಚಾರ ಮಾಡುವ ಕಾರ್ಯ ಮಾಡುತ್ತವೆ. ಒಟ್ಟಿನಲ್ಲಿ ಅಂಚೆಯ ಮಹತ್ವ ಹಾಗೂ ಕಾಲದಿಂದ ಅದು ನಡೆದು ಬಂದ ಹಾದಿಯ ಬಗ್ಗೆ ಜನರಲ್ಲಿ ಅರಿವು ಮೂಡಿಸುವಂತಹ ಕಾರ್ಯ ಮಾಡುತ್ತವೆ. ಈ ಸಂದರ್ಭದಲ್ಲಿ ಅಂಚೆ ಇಲಾಖೆಯಲ್ಲಿ ಉತ್ತಮ ಸೇವೆಗೈಯುತ್ತಿರುವ ಸಿಬ್ಬಂದಿಗಳನ್ನು ಆಯ್ಕೆ ಮಾಡಿ ಸನ್ಮಾನಿಸುವ ಕಾರ್ಯವೂ ಕೆಲ ಸ್ಥಳಗಳಲ್ಲಿ ನಡೆಯುತ್ತವೆ.

### ಈ ಸಲದ ಥೀಮ್

ಪ್ರತಿ ಬಾರಿ ಒಂದೊಂದು ಥೀಮ್ ಅಡಿಯಲ್ಲಿ ವಿಶ್ವ ಅಂಚೆ ದಿನವನ್ನು ಆಚರಿಸಲಾಗುತ್ತದೆ. 2023ರ ಈ ಸಂದರ್ಭದಲ್ಲಿ ಅಂಚೆದಿನಾಚರಣೆಯನ್ನು "ನಂಬಿಕೆಗಾಗಿ ಒಟ್ಟಾಗಿ: ಸುರಕ್ಷಿತ ಮತ್ತು ಸಂಪರ್ಕಿತ ಭವಿಷ್ಯಕ್ಕಾಗಿ ಸಹಯೋಗ" ಎಂಬುದನ್ನು ವ್ಯಾಖ್ಯಾನಿಸಲಾಗಿದೆ.

# ವಿಶ್ವ ಹತ್ತಿ ದಿನ -2023

ಇಂದು ನಾವು ವಿಶ್ವ ಹತ್ತಿ ದಿನ 2023 ಅನ್ನು ಆಚರಿಸುತ್ತೇವೆ, ಇದು ವಿಶ್ವದ ಅತ್ಯಂತ ನವೀಕರಿಸಬಹುದಾದ ಸಂಪನ್ಮೂಲಗಳಲ್ಲಿ ಒಂದಾದ ಮತ್ತು ಸರಿಸುಮಾರು 100 ಮಿಲಿಯನ್ ಕುಟುಂಬಗಳನ್ನು ಬೆಂಬಲಿಸುವ ಸರಕುಗಳ ವಾರ್ಷಿಕ ಸ್ಮರಣಾರ್ಥವಾಗಿದೆ.

ಬೆಟರ್ ಕಾಟನ್‌ನಲ್ಲಿ, ಹತ್ತಿ ಬೆಳೆಯುವ ಸಮುದಾಯಗಳನ್ನು ಬೆಂಬಲಿಸಲು ಮತ್ತು ಬಲಪಡಿಸಲು ನಾವು ಪ್ರತಿದಿನ ಕೆಲಸ ಮಾಡುತ್ತಿದ್ದೇವೆ ಆದ್ದರಿಂದ ಅವರು ಅವಲಂಬಿಸಿರುವ ಬೆಳೆಯನ್ನು ಅವರು ಬೆಳೆಯುತ್ತಲೇ ಇರುತ್ತಾರೆ. ವಿಶ್ವದ ಅತಿದೊಡ್ಡ ಹತ್ತಿ ಸಮರ್ಥನೀಯ ಉಪಕ್ರಮವಾಗಿ, ನಮ್ಮ ಕಾರ್ಯತಂತ್ರದ ಗುರಿಗಳು ಸುಸ್ಥಿರ ಕೃಷಿ ಪದ್ಧತಿಗಳು ಮತ್ತು ನೀತಿಗಳನ್ನು ಎಂಬೆಡ್ ಮಾಡುವುದು; ಯೋಗಕ್ಷೇಮ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಹೆಚ್ಚಿಸಿ; ಮತ್ತು ಸುಸ್ಥಿರ ಹತ್ತಿಗೆ ಜಾಗತಿಕ ಬೇಡಿಕೆಯನ್ನು ಹೆಚ್ಚಿಸಿ. ಜೀವನೋಪಾಯ ಮತ್ತು ಪರಿಸರವನ್ನು ಪರಿವರ್ತಿಸಲು ಸಮರ್ಥನೀಯ ಹತ್ತಿಯ ಶಕ್ತಿಯನ್ನು ನಾವು ನಂಬುತ್ತೇವೆ.

ವಿಶ್ವ ಹತ್ತಿ ದಿನವನ್ನು 2021 ರಲ್ಲಿ ಯುನೈಟೆಡ್ ನೇಷನ್ಸ್ ಜನರಲ್ ಅಸೆಂಬ್ಲಿ ಅಳವಡಿಸಿಕೊಂಡಿದೆ. ವಾರ್ಷಿಕ ದಿನಾಂಕ 7 ಅಕ್ಟೋಬರ್, ಆದರೆ ಈ ವರ್ಷವನ್ನು ಅಕ್ಟೋಬರ್ 4 ರಂದು ವಿಶ್ವ ಹತ್ತಿ ದಿನ 2023 ಕಾರ್ಯಕ್ರಮದೊಂದಿಗೆ ಯುನೈಟೆಡ್ ನೇಷನ್ಸ್ ಇಂಡಸ್ಟ್ರಿಯಲ್ ಡೆವಲಪ್ಮೆಂಟ್ ಆರ್ಗನೈಸೇಶನ್ (UNIDO) ಮತ್ತು ದಿ. ವಿಯೆನ್ನಾ, ಆಸ್ಟ್ರಿಯಾದಲ್ಲಿ ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ (FAO).


ಈ ವರ್ಷದ ಥೀಮ್ "ಹತ್ತಿಯನ್ನು ನ್ಯಾಯೋಚಿತವಾಗಿ ಮಾಡುವುದು ಮತ್ತು ಕೃಷಿಯಿಂದ ಫ್ಯಾಷನ್‌ವರೆಗೆ ಎಲ್ಲರಿಗೂ ಸಮರ್ಥನೀಯವಾಗಿದೆ."

WCD 2023 ರಲ್ಲಿ ಪ್ರಸ್ತುತಪಡಿಸುತ್ತಿರುವ ನಮ್ಮದೇ ಆದ ಜಾಕಿ ಬ್ರೂಮ್‌ಹೆಡ್, ಹಿರಿಯ ಟ್ರೇಸಬಿಲಿಟಿ ಮ್ಯಾನೇಜರ್ ಅನ್ನು ಹೊಂದಲು ನಾವು ಹೆಮ್ಮೆಪಡುತ್ತೇವೆ. ಅವರು "ಹತ್ತಿ ವಲಯಕ್ಕೆ ಒಂದು ನಾವೀನ್ಯತೆಯಾಗಿ ಪತ್ತೆಹಚ್ಚುವಿಕೆ" ಕುರಿತು ಚರ್ಚಿಸುತ್ತಿದ್ದಾರೆ – ನಾವು ನಮ್ಮ ಟ್ರೇಸಬಿಲಿಟಿ ಪರಿಹಾರವನ್ನು ಪ್ರಾರಂಭಿಸಲು ತಯಾರಿ ನಡೆಸುತ್ತಿರುವಾಗ ನಾವು ಗಮನಹರಿಸುತ್ತಿರುವ ವಿಷಯ ತಿಂಗಳು ಮತ್ತು ನಾವು ರೈತರಿಗೆ ಮತ್ತು ಉಳಿದ ವಲಯಕ್ಕೆ ಹೆಚ್ಚಿನ ಅವಕಾಶವನ್ನು ಹೇಗೆ ಸೃಷ್ಟಿಸಬಹುದು ಎಂಬುದನ್ನು ಅನ್ವೇಷಿಸುವುದನ್ನು ಮುಂದುವರಿಸಿ.

ನಾವು ಈ ವಾರ ಸಿಇಒ ಅಲನ್ ಮೆಕ್‌ಕ್ಲೇ ಅವರು ಲಂಡನ್‌ನಲ್ಲಿ ದಿ ಎಕನಾಮಿಸ್ಟ್ ಸಸ್ಟೈನಬಿಲಿಟಿ ವೀಕ್‌ನಲ್ಲಿ ಮಾತನಾಡಿದ್ದೇವೆ, "ವರ್ಡ್ ಆನ್ ದಿ ಹೈ ಸ್ಟ್ರೀಟ್ – ಮೇಕಿಂಗ್ ಫ್ಯಾಶನ್ ಮತ್ತು ಕಾಸ್ಮೆಟಿಕ್ಸ್ ಸಸ್ಟೈನಬಲ್" ಎಂಬ ಪ್ಯಾನೆಲ್‌ನಲ್ಲಿ ಭಾಗವಹಿಸಿದ್ದೇವೆ.

ಇದು ಒಂದು ಆಂದೋಲನವಾಗಿದೆ ಮತ್ತು ಕ್ಷಣವಲ್ಲ, ಮತ್ತು ಪ್ರತಿಯೊಬ್ಬರೂ – ಬ್ರ್ಯಾಂಡ್‌ಗಳು ಮತ್ತು ಚಿಲ್ಲರೆ ವ್ಯಾಪಾರಿಗಳು, ತಯಾರಕರು, ನಿರ್ಮಾಪಕರು ಮತ್ತು ಗ್ರಾಹಕರು – ನಮ್ಮೊಂದಿಗೆ ಸೇರಿಕೊಳ್ಳುತ್ತಾರೆ ಮತ್ತು ಉತ್ತಮವಾದದ್ದರಲ್ಲಿ ಭಾಗವಾಗುತ್ತಾರೆ ಎಂದು ನಾವು ಭಾವಿಸುತ್ತೇವೆ.

ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಯಕ್ಸಂಬಾ



31 ಅಕ್ಟೋಬರ್ 2023ರ ಆರ್ಥಿಕ ಬೆಳವಣಿಗೆ

ಶಾಖೆಗಳು 81

ಠೇವು 218+ ಕೋಟಿ

ಸಾಲ 109+ ಕೋಟಿ

ಸದಸ್ಯರು 34+ ಸಾವಿರ

## ನೀ ಬಂದಾಗ ನನ್ನ ಜೀವನ ಶೃಂಗಾರ

ಬಂದೇ ನೀನು ತಂದೆ ಹರುಷ
ನೂರು ಕನಸು ಬಿತ್ತುತ್ತ
ಭಾವದೊಲುಮೆ ಎಳೆಯ ಹಕ್ಕಿ
ಒಲವ ಗೂಡು ಹೆಣೆಯುತ

ಕಂಡ ಕನಸು ಗರಿಯ ಬಿಚ್ಚಿ
ಹಾಡಿದೆ ನಾ ಅನುದಿನ
ನೀ ತೋರಿದೊಲುಮೆ ಹೊಳೆಯಲಿ
ಮಿಂದೆ ನಾ ಅನುಕ್ಷಣ

ಅದೇಕೋ ಮನದಿ ನಡುಕ
ನಿನ್ನ ಪಿಸು ಮಾತಿಲ್ಲದೆ
ಒಂದೊಂದು ಕ್ಷಣವೂ ಯುಗದ ಹಾಗೆ
ವಿರಹ ದುರಿಯೂ ಸುಡುತ್ತಿದೆ

ಇರದೆ ನೀನು ಬಾಳು ಬರಡು
ಮರೆಯಬೇಡ ನೀನು
ಒಂಟಿ ನಾ ಹೇಗೆ ಜಂಟಿ ಯಾಗದೆ,
ತೊರೆಯಬೇಡವೋ ನನ್ನನ್ನು

ಸಾವೆ ಬಂದರೂ ನಗುತಾ ಅಪ್ಪುವೇ
ಕಣ್ಣು ಮುಂದೆ ನೀನಿರಲು ಸ್ವರ್ಗ ನನಗೆ
ನಿ ಕಣ್ಣಿಂದ ದೂರವಿರಲು ನರಕ ನನಗೆ
ನಿನ್ನ ಜೊತೆ ಇರಲು ಶೃಂಗಾರವೇ ನನ್ನ ಜೀವನ

ಶ್ರೀ. ರಾಮಚಂದ್ರ ಸನದಿ
ಸಹ ಪ್ರಾಧ್ಯಾಪಕರು
ಡಾ॥ ಬಾಬಾಸಾಹೇಬ ಅಂಬೇಡ್ಕರ (ಬಿ.ಇಡಿ.)
ಶಿಕ್ಷಣ ಮಹಾವಿದ್ಯಾಲಯ, ನಣದಿ

## ಶ್ರೀ ಬೀರೇಶ್ವರ ಕೋ-ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ-ಸ್ಟೇಟ)ಗೆ

# ರಾಷ್ಟ್ರಮಟ್ಟದ ಪ್ರಶಸ್ತಿ ಪ್ರದಾನ




ಯಕ್ಷಂಬಾ ಪಟ್ಟಣದ ಶ್ರೀ ಬೀರೇಶ್ವರ ಸಂಸ್ಥೆಗೆ ಅತ್ಯುತ್ತಮ ಬಹುರಾಜ್ಯ ಸಹಕಾರಿ ಸಂಘ ಎಂದು ಪರಿಗಣಿಸಿ ಫ್ರಂಟಿಯರ್ ಇನ್ ಕೋ ಆಪರೇಟಿವ್ ಬ್ಯಾಂಕಿಂಗ್ (ಆಡಿಟ್ ವಿಭಾಗ) ವತಿಯಿಂದ ಕೊಡಮಾಡುವ ರಾಷ್ಟ್ರಮಟ್ಟದ ಪ್ರಶಸ್ತಿ ಲಭಿಸಿದೆ.

ಇತ್ತೀಚಿಗೆ ಗೋವಾ ರಾಜ್ಯದಲ್ಲಿ ಜರುಗಿದ ಸಹಕಾರ ಬ್ಯಾಂಕುಗಳ ರಾಷ್ಟ್ರೀಯ ಸಮ್ಮೇಳನ-2023ರಲ್ಲಿ ಬ್ಯಾಂಕಿಂಗ್ ಫ್ರಂಟಿಯರ್ ಹಾಗೂ ಸಹಕಾರ ಬ್ಯಾಂಕುಗಳ ಹಾಗೂ ರಾಷ್ಟ್ರೀಯ ಫೆಡರೇಶನ್ ಸಹಯೋಗದೊಂದಿಗೆ ಜರುಗಿದ ಸಮಾರಂಭದಲ್ಲಿ ಪ್ರಶಸ್ತಿ ಪ್ರಧಾನ ಮಾಡಲಾಯಿತು.

ಗೋವಾ ರಾಜ್ಯದ ಸಹಕಾರ ಸಚಿವರಾದ ಸುಭಾಷ ಶಿರೋಡಕರ, ಆರ್.ಬಿ.ಐ. ಬ್ಯಾಂಕಿನ ನಿವೃತ್ತ ಮುಖ್ಯ ಪ್ರಧಾನ ವ್ಯವಸ್ಥಾಪಕರಾದ ರತ್ನಾಕರ ದೇವಲೆ, ಬ್ಯಾಕಿಂಗ್ ಫ್ರಂಟಿಯರನ ಸಂಸ್ಥಾಪಕರಾದ ಬಾಬು ನಾಯರ, ಸಮೂಹ ಸಂಪಾದಕರಾದ ಮನೋಜ ಅವರಿಂದ ಬೀರೇಶ್ವರ ಸಂಸ್ಥೆಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ. ಬಹದ್ದೂರ್ ಗುರವ ಹಾಗೂ ಸಹಾಯಕ ಪ್ರಧಾನ ವ್ಯವಸ್ಥಾಪಕರಾದ ಶ್ರೀ. ಕಲ್ಲಪ್ಪ ಹುನ್ನರಗಿ ಪ್ರಶಸ್ತಿಯನ್ನು ಸ್ವೀಕರಿಸಿದರು.

ಸಂಸ್ಥೆಯ ಸಂಸ್ಥಾಪಕರು ಹಾಗೂ ಚಿಕ್ಕೋಡಿ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಹಾಗೂ ಸಹಸಂಸ್ಥಾಪಕ, ಮಾಜಿ ಸಚಿವರು ಹಾಗೂ ನಿಪ್ಪಾಣಿಯ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆಯವರು ಸೊಸೈಟಿಯ ಅಧಿಕಾರಿ ವರ್ಗದವರಿಗೆ ಅಭಿನಂದನೆ ಸಲ್ಲಿಸಿ "ನಮ್ಮ ಸಂಘದ ಸ್ವಚ್ಛ ಆಡಳಿತಕ್ಕೆ ಹಿಡಿದ ಕೈಗನ್ನಡಿಯಾಗಿದೆ". ಪ್ರಶಸ್ತಿ ಲಭಿಸಿರುವುದು ತುಂಬಾ ಖುಷಿ ತಂದು ಕೊಟ್ಟಿದೆ ಎಂದು ಹೇಳಿದರು.




ನಿಪ್ಪಾಣಿಯ ಶ್ರೀ ಹಾಲಸಿದ್ಧನಾಥ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, (ಬಹು-ರಾಜ್ಯ) ಇದರ 2023-24ನೇ ಸಾಲಿನ ಕಬ್ಬು ನುರಿಸುವ ಹಂಗಾಮು ಮತ್ತು ಬಾಯ್ಲರ್ ಪೂಜೆಯನ್ನು ನೀಡಸೋಸಿ ಸಿದ್ದಸಂಸ್ಥಾನ ಮಠದ ಪ.ಪೂ.ಶ್ರೀ ಮನ್ನಿರಂಜನ ಜಗದ್ಗುರು ಪಂಚಮ ಶಿವಲಿಂಗೇಶ್ವರ ಮಹಾಸ್ವಾಮಿಜಿ, ಹಾಗೂ ಚಿಂಚಣಿ ಮಠದ ಪ.ಪೂಜ್ಯ ಶ್ರೀ ಅಲ್ಲಮ ಪ್ರಭು ಮಹಾಸ್ವಾಮಿಗಳ ದಿವ್ಯಸಾನಿಧ್ಯದಲ್ಲಿ, ಜೊಲ್ಲೆ ದಂಪತಿ ಪೂಜೆ ನೆರವೇರಿಸಿ, ಚಾಲನೆ ನೀಡುತ್ತಿರುವುದು.





ಸಮೃದ್ಧಿಯಿಂದ ಬದುಕು, ಸರಳ ಯೋಜನೆಯನ್ನು ಅನುಷ್ಠಾನಗೊಳಿಸಲು ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ನಗರಸಭೆ, ಪುರಸಭೆ, ಪಟ್ಟಣ ಪಂಚಾಯತಗಳ ಸರ್ವ ಸದಸ್ಯರಿಗೆ "ಕಾರ್ಯಾಗಾರ ಸಭೆ"ಯನ್ನು ರಾಜ್ಯ ಸಂಚಾಲಕರು, ಪಿ.ಎಂ ಸ್ವ-ನಿಧಿ, ಮಾಜಿ ಸಚಿವರಾದ ಶ್ರೀ ಎಸ್.ಎ.ರಾಮದಾಸ ಅವರ ಅಧ್ಯಕ್ಷತೆಯಲ್ಲಿ ಜೊಲ್ಲೆ ದಂಪತಿ ಉದ್ಘಾಟಿಸುತ್ತಿರುವುದು.




ಹುಕ್ಕೇರಿಯಲ್ಲಿ ನಾಡಹಬ್ಬ ದಸರಾ ಮಹೋತ್ಸವದ ಅಂಗವಾಗಿ ಮಹಿಳಾ ದಸರಾ ಕಾರ್ಯಕ್ರಮದಲ್ಲಿ ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಭಾಗವಹಿಸಿ ಮಾತನಾಡುತ್ತಿರುವ ದೃಶ್ಯ.




ನಿಪ್ಪಾಣಿ ನಗರದಲ್ಲಿ ಪ್ರಧಾನಮಂತ್ರಿ ಮೈಕ್ರೋ ಫುಡ್ ಪ್ರೊಸೆಸಿಂಗ್ ಯೋಜನೆಯಡಿಯಲ್ಲಿ ಮಹಿಳೆಯರು ತಯಾರಿಸಿದ ಉತ್ಪನ್ನಗಳ ಮಾರುಕಟ್ಟೆಗಾಗಿ ಜೊಲ್ಲೆ ಗ್ರೂಪ್ ವತಿಯಿಂದ ಮೊಬೈಲ್ ವ್ಯಾನ್ ಶಾಪಿಯನ್ನು ಜೊಲ್ಲೆ ದಂಪತಿ ಉದ್ಘಾಟಿಸಿ, ವಾಹನಕ್ಕೆ ಚಾಲನೆ ನೀಡುತ್ತಿರುವುದು.




ಚಿಕ್ಕೋಡಿ ನಗರದಲ್ಲಿ ವಿಶ್ವ ಹಿಂದೂ ಪರಿಷತ್, ಮಾತೃಶಕ್ತಿ ದುರ್ಗಾವಾಹಿನಿ ಚಿಕ್ಕೋಡಿ ಇವರ ವತಿಯಿಂದ ಆಯೋಜಿಸಿದ್ದ ದುರ್ಗಾಷ್ಟಮಿ ಕಾರ್ಯಕ್ರಮದಲ್ಲಿ ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಹಾಗೂ ಚಿಕ್ಕೋಡಿ ಲೋಕಸಭೆ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಭಾಗವಹಿಸಿದ ದೃಶ್ಯ.

**ಜೊಲ್ಲೆ ಉದ್ಯೋಗ ಸಮೂಹ** ರಾಣಿ ಚನ್ನಮ್ಮಾ ವೃತ್ತ, ಯಕ್ಸಂಬಾ ತಾ. ಚಿಕ್ಕೋಡಿ ಜಿ. ಬೆಳಗಾವಿ- 591244 Ph : 9844469288 / 7760983792 E-mail : darpanjus6@gmail.com

ಪ್ರಧಾನ ಸಂಪಾದಕರು :- ಸೌ. ಸುಧಾ ಡಿ. ಪಾಟೀಲ, ಉಪನ್ಯಾಸಕರು, ಕನ್ನಡ ವಿಭಾಗ